ವಿಜಯವಾಣಿ
ಕನ್ನಡಿಗರ ಧ್ವನಿ

**Monday 29th July 2019, Page No.02**

**Opening Cermony of BE Classes at RVCE**

# ಪ್ರಯೋಗಾತ್ಮಕ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ಕರೆ

ವಿಜಯವಾಣಿ ಚಿತ್ರ



**ಆರ್‌ವಿ ತಾಂತ್ರಿಕ ಕಾಲೇಜಿನಲ್ಲಿ ಬಿಇ ತರಗತಿಗಳ ಉದ್ಘಾಟನೆ ಸಮಾರಂಭದಲ್ಲಿ ಹಿಮಾಲಯ ಪರ್ಯಾಯ ಕೇಂದ್ರದ ಸೋನಮ್ ವಾಂಗ್ಚುಕ್, ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಡಾ.ಎಂ.ಕೆ.ಪಾಂಡುರಂಗ ಶೆಟ್ಟಿ, ಕಾಲೇಜು ಪ್ರಾಂಶುಪಾಲ ಡಾ.ಕೆ.ಎನ್. ಸುಬ್ರಹ್ಮಣ್ಯ, ಎ.ವಿ.ಎಸ್. ಮೂರ್ತಿ ಇತರರು ಉಪಸ್ಥಿತರಿದ್ದರು.**

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ವಿದ್ಯಾರ್ಥಿಗಳು ಕೇವಲ ಓದು ಮತ್ತು ಅಂಕಗಳಿಗೆ ಅಂಟಿಕೊಂಡು ಕೂರದೆ ಪ್ರಯೋಗಗಳಿಗೆ ಒತ್ತು ನೀಡಿದಲ್ಲಿ ಅನುಭವ ದೊರೆತು ಆತ್ಮವಿಶ್ವಾಸ ಹೆಚ್ಚಲಿದೆ. ಇದರಿಂದ ಯಶಸ್ಸು ಸಿಗಲಿದೆ ಎಂದು ಹಿಮಾಲಯ ಪರ್ಯಾಯ ಕೇಂದ್ರದ ಸಂಸ್ಥಾಪಕ ಸೋನಮ್ ವಾಂಗ್ಚುಕ್ ಹೇಳಿದ್ದಾರೆ.

ಆರ್‌ವಿ ಇಂಜಿನಿಯರಿಂಗ್ ಕಾಲೇಜು ಆಯೋಜಿಸಿದ್ದ 2019ನೇ ಸಾಲಿನ ಬಿ.ಇ. ತರಗತಿಗಳ ಉದ್ಘಾಟನೆ ಸಮಾರಂಭದಲ್ಲಿ ಮಾತನಾಡಿದರು. ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಬೆಂಗಳೂರು ಸ್ವರ್ಗ ಇದ್ದಂತೆ. ಕಾರಣ, ಇಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಇದಕ್ಕೆ ಪರಿಹಾರ ಕಂಡುಹಿಡಿಯುವುದೇ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸವಾಲಾಗಿರುತ್ತದೆ. ಹೀಗಾಗಿ ವಿದ್ಯಾರ್ಥಿಗಳು ಆವಿಷ್ಕಾರಗಳ ಕಡೆ ಹೆಚ್ಚಿನ ಗಮನಹರಿಸಬೇಕು. ಯಶಸ್ಸು ಸಿಗಬೇಕಾದರೆ ಅನುಭವ ಬೇಕು. ಅನುಭವದಿಂದ ಆತ್ಮವಿಶ್ವಾಸ ಹೆಚ್ಚಾಗುತ್ತದೆ. ಇದರಿಂದ ಯಶಸ್ಸು ದೊರೆಯಲಿದೆ ಎಂದರು.

» **ಆರ್.ವಿ. ಇಂಜಿನಿಯರಿಂಗ್ ಕಾಲೇಜಿನಲ್ಲಿ ಬಿ.ಇ ತರಗತಿ ಉದ್ಘಾಟನೆ**

» **ಹಿಮಾಲಯ ಪರ್ಯಾಯ ಕೇಂದ್ರ ಸಂಸ್ಥಾಪಕ ವಾಂಗ್ಚುಕ್ ಸಲಹೆ**

**ಪ್ರಯೋಗಾತ್ಮಕ ಶಿಕ್ಷಣ:** ವಿದ್ಯಾರ್ಥಿಗಳು ಮೊದಲು ತಮ್ಮ ಗುರಿಯನ್ನು ಸ್ಪಷ್ಟಪಡಿಸಿಕೊಳ್ಳಬೇಕು. ಕೇವಲ ತರಗತಿಗಳಲ್ಲಿ ಕುಳಿತು ಪಾಠ ಕೇಳುವುದಲ್ಲ. ಇದರ ಹೊರತಾಗಿ ಪ್ರಪಂಚದಲ್ಲಿ ಕಲಿಯಬೇಕಿರುವುದು ಸಾಕಷ್ಟಿದೆ. ನಿಮ್ಮ ಅಕ್ಕಪಕ್ಕದಲ್ಲೇ ಇರುವ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವ ಜವಾಬ್ದಾರಿಯನ್ನು ವಿದ್ಯಾರ್ಥಿಗಳು ತೆಗೆದುಕೊಳ್ಳಬೇಕು. ಪ್ರಾರಂಭದಲ್ಲಿ ಸೋಲುವುದು ಸಾಮಾನ್ಯ. ಅದು ನಿಮಗೆ ಇನ್ನಷ್ಟು ಅನುಭವವನ್ನು ನೀಡಲಿದೆ ಎಂದು ಹೇಳಿದರು.

ನಾನು ಲಡಾಕ್‌ನ ಸಣ್ಣ ಹಳ್ಳಿಯಿಂದ ಬಂದವನು. ನಮ್ಮಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಅದನ್ನು ಸರಿಪಡಿಸುತ್ತಿದ್ದೇನೆ. ಅನವಶ್ಯಕ ವಿದ್ಯುತ್ ಪೋಲಾಗುತ್ತದೆ ಎಂದು ನಾನು ನನ್ನ ಬಟ್ಟೆಗೆ ಇಸ್ತ್ರಿ ಮಾಡುವುದಿಲ್ಲ. 4 ಜತೆ ಬಟ್ಟೆ ಇಸ್ತ್ರೀ ಮಾಡಲು ಬೇಕಾದ ವಿದ್ಯುತ್‌ನಲ್ಲಿ ನಾಲ್ಕು ದಿನ ಬಡವರ ಮನೆ ಬೆಳಗಲಿದೆ. ಹೀಗಾಗಿ ಸಾಧ್ಯವಾದಷ್ಟು ಪ್ರಕೃತಿ ಪೂರಕವಾಗಿ ಜೀವನ ನಡೆಸಿ ಎಂದು ಸಲಹೆ ನೀಡಿದರು.

ಪಾಲಕರು ವಿದ್ಯಾರ್ಥಿಗಳೊಂದಿಗೆ ಸಂಪರ್ಕದಲ್ಲಿರಬೇಕು. ಅವರ ಯೋಗ ಕ್ಷೇಮ, ಓದಿನ ಬಗ್ಗೆ ವಿಚಾರಿಸಿಕೊಳ್ಳುತ್ತಿರಬೇಕು ಎಂದು ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಡಾ.ಎಂ.ಕೆ.ಪಾಂಡುರಂಗ ಶೆಟ್ಟಿ ಹೇಳಿದರು. ಕಾಲೇಜಿನ ಪ್ರಾಂಶುಪಾಲ ಡಾ.ಕೆ.ಎನ್. ಸುಬ್ರಹ್ಮಣ್ಯ ವಿದ್ಯಾರ್ಥಿಗಳಿಗೆ ಕಾಲೇಜಿನಲ್ಲಿರುವ ಸೌಕರ್ಯ ಮತ್ತು ವಿದ್ಯಾರ್ಥಿಗಳು ಪಾಲಿಸಬೇಕಾದ ನಿಯಮಗಳನ್ನು ತಿಳಿಸಿದರು. ಆರ್‌ಎಸ್‌ಎಸ್‌ಟಿ ಗೌರವ ಕಾರ್ಯದರ್ಶಿ ಎ.ವಿ.ಎಸ್. ಮೂರ್ತಿ ಮತ್ತಿತರರು ಇದ್ದರು.

**Namaste Bengaluru Edition**
**July 29, 2019, Page No.02**

## Graduation Day in RV College of Engineering

# ಕೌಶಲ ತರಬೇತಿಯಿಂದ ಆರ್ಥಿಕ ಬೆಳವಣಿಗೆ ಸಾಧ್ಯ

■ ವಿಜಯವಾಣಿ ಸುದ್ದಿಜಾಲ ಯಶವಂತಪುರ

ಆಧುನಿಕತೆಗೆ ಪೂರಕ ಕೌಶಲ ತರಬೇತಿ ಪಡೆದು, ಉದ್ಯಮದ ಸರ್ವಾಂಗೀಣ ಪ್ರಗತಿಗೆ ಕೈಜೋಡಿಸುವ ಮೂಲಕ ದೇಶದ ಆರ್ಥಿಕ ಬೆಳವಣಿಗೆಗೆ ಕೊಡುಗೆ ನೀಡಬೇಕು ಎಂದು ಕೇಂದ್ರ ಸಚಿವಾಲಯದ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ಸ್ ಆಫ್ ಇಂಡಿಯಾ ಡೈರೆಕ್ಟರ್ ಜನರಲ್ ಡಾ.ಒಮ್ಕರ್ ರಾಯ್ ಸಲಹೆ ನೀಡಿದ್ದಾರೆ.

» **ಕೇಂದ್ರ ಸಚಿವಾಲಯದ ಡಾ. ಒಮ್ಕರ್ ರಾಯ್ ಸಲಹೆ**

» **ಆರ್.ವಿ. ತಾಂತ್ರಿಕ ಮಹಾವಿದ್ಯಾಲಯದಲ್ಲಿ ಪದವಿ ಪ್ರದಾನ**

ಮೈಸೂರು ರಸ್ತೆಯ ಆರ್.ವಿ. ತಾಂತ್ರಿಕ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ 9ನೇ ಪದವಿ ಪ್ರದಾನ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಿ ಮಾತನಾಡಿದರು.

ಮಾಹಿತಿ ತಂತ್ರಜ್ಞಾನ ಅವಿಷ್ಕಾರದ ಪ್ರಗತಿ ಜತೆಗೆ ಉತ್ಪನ್ನ ವಲಯದಲ್ಲೂ ಛಾಪನ್ನು ಮೂಡಿಸಿ ವಿಶ್ವದ ಅಗ್ರಗಣ್ಯ ರಾಷ್ಟ್ರಗಳು ಭಾರತದ ಕಡೆಗೆ ತಿರುಗಿ ನೋಡುವ ವಾತಾವರಣ ನಿರ್ಮಾಣ ಮಾಡುವಲ್ಲಿ ನಮ್ಮ ಇಂಜಿನಿಯರ್‌ಗಳ, ವಿಜ್ಞಾನಿಗಳ ಹಾಗೂ ಸಂಶೋಧಕರ ಪಾತ್ರ ಮಹತ್ವದ್ದು ಎಂದು ಹೇಳಿದರು.

ಕಾಲೇಜಿನಲ್ಲಿ ಉತ್ತಮ ಕಲಿಕಾ ವಾತಾವರಣ ನಿರ್ಮಾಣ ಮಾಡಿ ಗುಣ ಮಟ್ಟದ ಶಿಕ್ಷಣ ದೊರಕುವಂತೆ ಮಾಡುವ ಮೂಲಕ ಉಜ್ವಲ ಭವಿಷ್ಯ ರೂಪಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಸಹಕಾರ ನೀಡುವುದು ನಮ್ಮ ಧ್ಯೇಯ ಎಂದು ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಡಾ.ಎಂ.ಕೆ. ಪಾಂಡುರಂಗ ಸೆಟ್ಟಿ ಹೇಳಿದರು.

ಎಂ.ಟೆಕ್.ನ 19 ವಿದ್ಯಾರ್ಥಿಗಳು, ಎಂಸಿಎ ವಿಭಾಗದ 12 ವಿದ್ಯಾರ್ಥಿಗಳು ಹಾಗೂ ಆರ್ಕಿಟೆಕ್ಟ್ ವಿಭಾಗದ ಒಬ್ಬರಿಗೆ ಚಿನ್ನದ ಪದಕ ವಿತರಿಸಲಾಯಿತು. ಕಾಲೇಜಿನ ಒಟ್ಟು 1,519 ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರ ವಿತರಿಸಲಾಯಿತು. ಪ್ರಾಂಶುಪಾಲ ಡಾ.ಕೆ.ಎನ್. ಸುಬ್ರಮಣ್ಯ, ಕಾಲೇಜಿನ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.

ವಿಜಯವಾಣಿ ಚಿತ್ರ




ಪದವಿ ಪ್ರದಾನ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಹಾಗೂ ಪ್ರಮಾಣ ಪತ್ರವನ್ನು ಎಸ್‌ಟಿಪಿಐ ಡೈರೆಕ್ಟರ್ ಜನರಲ್ ಡಾ. ಒಮ್ಕರ್ ರಾಯ್ ವಿತರಿಸಿದರು. ಆಡಳಿತ ಮಂಡಳಿ ಅಧ್ಯಕ್ಷ ಡಾ.ಎಂ.ಕೆ. ಪಾಂಡುರಂಗ ಶೆಟ್ಟಿ, ಪ್ರಾಂಶುಪಾಲ ಡಾ.ಕೆ.ಎನ್. ಸುಬ್ರಮಣ್ಯ ಇತರರಿದ್ದರು.